ತಲುಪುತ್ತಿದ್ದದ್ದು ಇದಕ್ಕೆ ಕಾರಣವಿರಬೇಕು. ಜೇಬಿನೊಳಗಿಡುವ ಬಾಚಣಿಕೆ, ಹೊರ ಭಾಗದಿಂದ ಕನ್ನಡಿಯಂತೆ ಹೊಳೆಯುತ್ತಿದ್ದ, ಆದರೆ ಒಳಗಿನಿಂದ ಅತ್ತ-ಇತ್ತಲಿನ ದೃಶ್ಯಗಳು ಕಾಣಿಸುವಂಥ ಕೂಲಿಂಗ್ ಗ್ಲಾಸ್, ಟವಲಿನಂಥ ಬಟ್ಟೆಯ ಪಟೇಲನ ಹಳದಿ ಬನಿಯನ್, ಪಂಜಾಬಿಗಳ ಅಷ್ಟಧಾತುವಿನ ಕಡಗ, ರಬ್ಬರ್ ಹಂಟರ್ ಇತ್ಯಾದಿ ವಸ್ತುಗಳನ್ನು ಅಬ್ಬಿ ನಗರದಿಂದ ಹಳ್ಳಿಗೆ ತಂದಿದ್ದ.

ಅಬ್ಬಿ ಹಾರ್ಮೋನಿಯಂ ಖರೀದಿಸಿದ ದಿನದಿಂದ ಹಗಲು-ರಾತ್ರಿ 'ಚೀಂಪ್-ಚೀಂಪ್' ಎಂದು ನುಡಿಸುತ್ತಿದ್ದ. ಅವನ ಜೇಬುಗಳಲ್ಲಿ ಒಂದೊಂದು ಆಣೆಗೆ ಮಾರಲ್ಪಡುವ ಸಿನಿಮಾ ಹಾಡುಗಳ ಪುಸ್ತಕಗಳಿರುತ್ತಿದ್ದವು. ಅವನು ನಗರದಲ್ಲಿ ಕವ್ವಾಲಿಗಳನ್ನು ನೋಡಿದ್ದ; ತಾನೂ ಕವ್ವಾಲಿಯಾಗಬೇಕೆಂಬ ಇಚ್ಛೆ ಮನಸ್ಸಿನಲ್ಲಿತ್ತು. ಆದರೆ, ಎಷ್ಟೇ ಪ್ರಯತ್ನಿಸಿದ್ದಾಗ್ಯೂ-'ಹಮೇಂ ತೋ ಲೂಟ್ ಲಿಯಾ ಮಿಲ್ ಕೆ ಹುಸ್ನ್ವಾಲೋಂ ನೇ'ಯನ್ನು ಹೊರತುಪಡಿಸಿ ಬೇರಾವ ಕವ್ವಾಲಿ ಅವನಿಗೆ ನೆನಪೇ ಬರಲಿಲ್ಲ.

ನಂತರ ಅಬ್ಬಿ ತನ್ನ ಗಡ್ಡ-ಮೀಸೆಗಳನ್ನು ಬೋಳಿಸಿದ, ತಲೆಕೂದಲು ಬೆಳೆಸಿದ. ಮುಖಕ್ಕೆ ಅತಿಯಾದ ದ್ರಾವಣವನ್ನು ಲೇಪಿಸಿಕೊಂಡ. ಹಳ್ಳಿಯ ಧೋಬಿಯ ಮಗ ಜಿಯಾವನ್ ಕೂಡ ಅವನೊಂದಿಗೆ ಕೂಡಿಕೊಂಡ; ಇಬ್ಬರೂ ಹಳ್ಳಿ-ಹಳ್ಳಿಗೆ ಹೋಗಿ ಹಾಡನ್ನು ನುಡಿಸಲು ಆರಂಭಿಸಿದರು. ಅಬ್ಬಿ ಈ ಕೆಲಸಕ್ಕೆ ಆರ್ಟ್ ಎನ್ನುತ್ತಿದ್ದ, ಆದರೆ ಹಳ್ಳಿಯ ಜನ, 'ಈ ನನ್ಮಗ ತಮಾಷೆ ಮಾಡ್ತಿದ್ದಾನೆ' ಎನ್ನುತ್ತಿದ್ದರು. ಒಟ್ಟಿನಲ್ಲಿ ಅಬ್ಬಿ ತನ್ನ ಹೆಂಡತಿ ಉಂಡು-ಉಡುವಷ್ಟು ಹಣವನ್ನು ಸಂಪಾದಿಸುತ್ತಿದ್ದ.

ಟೇಪಚೂ ಈ ಅಬ್ಬಿಯ ಮಗ. ಟೇಪಚೂಗೆ ಎರಡು ವರ್ಷವಾದಾಗ ಅಬ್ಬಿ ಅಕಸ್ಮಾತ್ ಸತ್ತ.

ಅಬ್ಬಿಯ ಸಾವೂ ಸಹ ವಿಚಿತ್ರ ದುರ್ಘಟನೆಯೊಂದರಲ್ಲಿ ಸಂಭವಿಸಿತು. ಆಷಾಢದ ದಿನಗಳಲ್ಲಿ ಸೋನ್ ನದಿ ಉಕ್ಕುತ್ತಿತ್ತು. ಬಿಳಿ ನೊರೆ ಮತ್ತು ಮರದಿಂದ ಕೊಳೆತ ಲಾಠಿ-ದೊಣ್ಣೆ-ಹಲಗೆಗಳು ನೀರಿನಲ್ಲಿ ತೇಲುತ್ತಿದ್ದವು. ನೀರು ಚಹಾದ ಬಣ್ಣದಂತೆ ಮಣ್ಣಿನಮಯವಾಗಿತ್ತು. ಅದರಲ್ಲಿ ತಿಪ್ಪೆ, ಪಾಚಿ, ಕಸಕಡ್ಡಿಗಳು ಹರಿದಾಡುತ್ತಿದ್ದವು. ಇದು ಪ್ರವಾಹದ ಪೂರ್ವ ಸೂಚನೆಯಾಗಿತ್ತು. ಗಂಟೆ-ಎರಡು ಗಂಟೆಯೊಳಗೆ ಸೋನ್ ನದಿಯಲ್ಲಿ ನೀರು ಹೆಚ್ಚುವ ಸಂಭವವಿತ್ತು. ಅಬ್ಬಿ ಮತ್ತು ಜಿಯಾವನ್ ಆತುರದಲ್ಲಿದ್ದರು. ಹೀಗಾಗಿ, ಅವರು ಪ್ರವಾಹ ಬರುವುದಕ್ಕೂ ಮೊದಲು ನದಿಯನ್ನು ದಾಟಲುಬಯಸುತ್ತಿದ್ದರು. ಅವರು ನದಿಯನ್ನು ದಾಟುವ ತೀರ್ಮಾನ ತೆಗೆದುಕೊಳ್ಳುವಷ್ಟರಲ್ಲಿ ನದಿಯಲ್ಲಿ ಸೊಂಟದವರೆಗೆ ನೀರು ಬಂದಿತ್ತು. ಹಳ್ಳಿಯ ಜನ ಸಣ್ಣ ಬಾವಿಯನ್ನು ತೋಡಿದ್ದ ಜಾಗದಲ್ಲಿ ನೀರು ಎದೆಯ ಮಟ್ಟಕ್ಕೆ ಬಂದಿತ್ತು. ಜಿಯಾವನ್ ಮತ್ತು ಅಬ್ಬಿ ತುಂಬಾ ವಿಶ್ವಾಸದಿಂದ ನದಿಯನ್ನು ದಾಟುತ್ತಿದ್ದರೆಂದು ಜನ ಹೇಳುತ್ತಾರೆ. ನದಿಯ ಇನ್ನೊಂದು ತೀರದಲ್ಲಿ ಹಳ್ಳಿಯ ಹೆಂಗಸರು ಕೊಡಗಳನ್ನು ಹಿಡಿದು ನಿಂತಿದ್ದರು. ಅವರನ್ನು ನೋಡಿ ಅಬ್ಬಿ ಉತ್ಸಾಹಗೊಂಡ. ಜಿಯಾವನ್ ಪರದೇಸಿ ಸಿನಿಮಾ ಹಾಡಿನ ರಾಗವನ್ನು ಆಲಾಪಿಸಿದ. ಅದಕ್ಕೆ ಅಬ್ಬಿ ಸಹ ಧ್ವನಿಗೂಡಿಸಿದ. ಹಾಡು ಕಚಗುಳಿ ಇಡುವಂತಿದ್ದು, ಮಹಿಳೆಯರು ಖುಷಿಗೊಂಡಿದ್ದರು, ಕಿಲಕಿಲನೆ ನಗುತ್ತಿದ್ದರು. ಅಬ್ಬಿಯ ಕೊರಳಿನಲ್ಲಿದ್ದ ಟವಲ್ಲಿಗೆ ಕಟ್ಟಿದ್ದ ಹಾರ್ಮೋನಿಯಂ ನೇತಾಡುತ್ತಿತ್ತು. ಅಬ್ಬಿ ಅವನಿಂದ ಹಾರ್ಮೋನಿಯಂ ತೆಗೆದುಕೊಂಡು ತನ್ನ ಕೊರಳಿಗೆ ನೇತು ಹಾಕಿಕೊಂಡ. ನಂತರ ರಸವತ್ತಾದ ಸಾಲ್ಹೋ (ಇದೊಂದು ಜಾನಪದ ಗೀತೆಯಾಗಿದ್ದು, ಇದನ್ನು ವಿಶೇಷವಾಗಿ ಛತ್ತೀಸಗಢ ಮತ್ತು ವಿಂಧ್ಯಪ್ರದೇಶ ಆದಿವಾಸಿಗಳು ಮತ್ತು ಗ್ರಾಮೀಣ ಜನರು ಹಾಡುತ್ತಾರೆ.) ಹಾಡಲಾರಂಭಿಸಿದ. ಇನ್ನೊಂದು ದಡದಲ್ಲಿ ನಿಂತಿದ್ದ ಮಹಿಳೆಯರ ಕಂಠದಿಂದ ಚೀರಾಟ ಕೇಳಿಬಂತು. ಜಿಯಾವನ್ ಗಾಬರಿಯಿಂದ ನಿಂತು ಬಿಟ್ಟ. ಅಬ್ಬಿಯ ಕಾಲುಗಳು ಬಹುಶಃ ತಪ್ಪಿನಿಂದಾಗಿ ಒಂದು ಚಿಕ್ಕ ಬಾವಿ ಅಥವಾ ಹೊಂಡದಲ್ಲಿ ಸಿಲುಕಿಕೊಂಡಿತ್ತು. ಈ ನಡುವೆ ಅವನು ನೀರಿನ ಧಾರೆಯಲ್ಲಿ ಬಿದ್ದ. ಕೊರಳಿನಲ್ಲಿದ್ದ ಹಾರ್ಮೋನಿಯಂ ಅವನಿಗೆ ಕೈ-ಕಾಲು ಬಡಿಯಲೂ ಅವಕಾಶವನ್ನು ಕೊಡಲಿಲ್ಲ. ಏನಾಗಿತ್ತೆಂದರೆ, ಅಬ್ಬಿ ಸಿನಿಮಾವೊಂದರಲ್ಲಿ ನೋಡಿದ್ದ ವೈಜಯಂತಿ ಮಾಲಾಳ ನೃತ್ಯವನ್ನು ಅಣಕು ಮಾಡುವಲ್ಲಿ ಮಗ್ನನಾಗಿದ್ದು, ಈ ನೃತ್ಯದ ನಡುವೆ ಅವನ ಕಾಲು ಒಂದು ಚಿಕ್ಕ ಬಾವಿಯೊಳಗೆ ಸಿಲುಕಿತು. ಕೆಲವರು, ನದಿಯಲ್ಲಿ 'ಕಳ್ಳ ಮರಳು' ಸಹ ಇರುವುದೆಂದು